# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಸುವರ್ಣ ಗ್ರಾಮೋದಯ ಯೋಜನೆಯಡಿ ಆಯ್ಕೆಯಾಗಿರುವ ಗ್ರಾಮಗಳಲ್ಲಿನ ಬಾಕಿ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ 2017-18ನೇ ಸಾಲಿನಲ್ಲಿ ಕೊಪ್ಪಳ ಜಿಲ್ಲಾ ಪಂಚಾಯಿತಿಗೆ ಅನುದಾನ ಬಿಡುಗಡೆ ಮಾಡುವ ಕುರಿತು.

ಓದಲಾಗಿದೆ:

1. ಸರ್ಕಾರಿ ಆದೇಶ ಸಂಖ್ಯೆ: ಗ್ರಾಅಪ: 145: ಎಎಫ್ಎನ್: 2017 ದಿ:01.04.2017.
2. ಆರ್ಥಿಕ ಇಲಾಖೆಯ ಅಟಿ ಸಂಖ್ಯೆ:ಆಇ: 79 :ವೆಚ್ಚ-6/ 2017 ದಿ:01.04.2017.
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಕೊಪ್ಪಳ ರವರ ಪತ್ರ ಸಂಖ್ಯೆ:ಜಿಪಂಕೋ:ಅಭಿವೃದ್ಧಿ:ಸುಗ್ರಾಯೋ:2017-18 ದಿ:16.06.2017.

* * *

**ಪ್ರಸ್ತಾವನೆ:**

2017-18ನೇ ಸಾಲಿನಲ್ಲಿ ಆಯವ್ಯಯದಲ್ಲಿ ಪ್ರಗತಿಯಲ್ಲಿರುವ ಸುವರ್ಣ ಗ್ರಾಮೋದಯ ಯೋಜನೆಯ ಕಾಮಗಾರಿಗಳನ್ನು ಪೂರ್ಣಗೊಳಿಸಲು ಹಾಗೂ 2014-15ನೇ ಸಾಲಿನಿಂದ ಆರಂಭವಾಗಿರುವ ಗ್ರಾಮ ವಿಕಾಸ ಯೋಜನೆಯನ್ನು ಅನುಷ್ಠಾನಗೊಳಿಸಲು ಓದಲಾದ (1) ರಲ್ಲಿ ರೂ.516.00 ಕೋಟಿಗಳನ್ನು ಅನುದಾನವನ್ನು ಒದಗಿಸಿ, ಈ ಕೆಳಕಂಡಂತೆ ಹಂಚಿಕೆ ಮಾಡಲಾಗಿದೆ.

1. 4215-02-800-0-02-132 (ಯೋಜನೆ) ಬಂಡವಾಳ ವೆಚ್ಚಗಳು - ರೂ. 296.96 ಕೋಟಿಗಳು
2. 4215-02-800-0-02-422 (ಯೋಜನೆ) ವಿಶೇಷ ಘಟಕ ಯೋಜನೆ - ರೂ. 148.95 ಕೋಟಿಗಳು
3. 4215-02-800-0-02-423 (ಯೋಜನೆ) ಗಿರಿಜನ ಉಪ ಯೋಜನೆ - ರೂ. 70.09 ಕೋಟಿಗಳು

**ಒಟ್ಟು - ರೂ. 516.00 ಕೋಟಿಗಳು**

ಓದಲಾದ (2) ರಂತೆ ಬೆಂಗಳೂರಿನ ಎಂ.ಜಿ.ಆರ್.ಐ.ಡಿ ಆವರಣದಲ್ಲಿ ಮಾದರಿ ಪಾರಂಪರಿಕ ಗ್ರಾಮವೊಂದನ್ನು ಸ್ಥಾಪಿಸಲು ರೂ.3.00 ಕೋಟಿಗಳನ್ನು ಮೀಸಲಿರಿಸಿದೆ.

ಕೊಪ್ಪಳ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಸುವರ್ಣ ಗ್ರಾಮೋದಯ ಯೋಜನೆಯಡಿ ಆಯ್ಕೆಯಾಗಿರುವ ಗ್ರಾಮಗಳಲ್ಲಿ ಬಾಕಿ ಉಳಿದ ಕಾಮಗಾರಿಗಳನ್ನು ಪೂರ್ಣಗೊಳಿಸುವ ಕುರಿತು ಓದಲಾದ (3)ರ ಪ್ರಸ್ತಾವನೆಯನ್ನು ಮತ್ತು ಯೋಜನೆಯ ಪ್ರಗತಿಯನ್ನು ಸರ್ಕಾರ ಪರಿಶೀಲಿಸಿದೆ, ಅದರಂತೆ ಸುವರ್ಣ ಗ್ರಾಮೋದಯ ಯೋಜನೆಯಡಿ ಆಯ್ಕೆಯಾಗಿರುವ ಗ್ರಾಮಗಳಲ್ಲಿ ಬಾಕಿ ಉಳಿದ ಕಾಮಗಾರಿಗಳನ್ನು ಪೂರ್ಣಗೊಳಿಸಲು ಕೊಪ್ಪಳ ಜಿಲ್ಲಾ ಪಂಚಾಯಿತಿಗೆ ರೂ. 75.00 ಲಕ್ಷಗಳ ಅನುದಾನ ಬಿಡುಗಡೆ ಮಾಡಬೇಕಾಗಿರುತ್ತದೆ.

ಪ್ರಯುಕ್ತ ಈ ಆದೇಶ.

**ಸರ್ಕಾರಿ ಆದೇಶ ಸಂಖ್ಯೆ : ಗ್ರಾಅಪ : 11 : ಗ್ರಾವಿಯೋ : 2017, (ಭಾಗ-1) ಬೆಂಗಳೂರು, ದಿನಾಂಕ:30.08.2017.**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ, ಕೊಪ್ಪಳ ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಲ್ಲಿ ಸುವರ್ಣ ಗ್ರಾಮೋದಯ ಯೋಜನೆಯಡಿ ಆಯ್ಕೆಯಾದ ಗ್ರಾಮಗಳಲ್ಲಿ ಬಾಕಿ ಉಳಿದ ಕಾಮಗಾರಿಗಳನ್ನು ಪೂರ್ಣಗೊಳಿಸಲು ಕೆಳಕಂಡ ಲೆಕ್ಕ ಶೀರ್ಷಿಕೆಗಳಡಿ ರೂ75.00 ಲಕ್ಷಗಳನ್ನು (ರೂಪಾಯಿ ಎಪ್ಪತ್ತೈದು ಲಕ್ಷಗಳು ಮಾತ್ರ) ಅನುದಾನವನ್ನು ಕೊಪ್ಪಳ ಜಿಲ್ಲಾ ಪಂಚಾಯಿತಿಗೆ ಬಿಡುಗಡೆ ಮಾಡಲಾಗಿದೆ. ಸದರಿ ಅನುದಾನವನ್ನು ಈ ಕೆಳಕಂಡ ಲೆಕ್ಕ ಶೀರ್ಷಿಕೆಗಳಡಿ ಭರಿಸತಕ್ಕದ್ದು.

1. 4215-02-800-0-02-132 (ಯೋಜನೆ) ಬಂಡವಾಳ ವೆಚ್ಚಗಳು - ರೂ. 42.75 ಲಕ್ಷಗಳು
2. 4215-02-800-0-02-422 (ಯೋಜನೆ) ವಿಶೇಷ ಘಟಕ ಯೋಜನೆ – ರೂ. 21.75 ಲಕ್ಷಗಳು
3. 4215-02-800-0-02-423 (ಯೋಜನೆ) ಗಿರಿಜನ ಉಪ ಯೋಜನೆ – ರೂ. 10.50 ಲಕ್ಷಗಳು

------------------------------------

**ಒಟ್ಟು ರೂ. 75.00 ಲಕ್ಷಗಳು**

**ಈ ಆದೇಶದಲ್ಲಿ ಬಿಡುಗಡೆ ಮಾಡಿರುವ ಅನುದಾನವನ್ನು ಕೊಪ್ಪಳ ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಲ್ಲಿ ಸುವರ್ಣ ಗ್ರಾಮೋದಯ ಯೋಜನೆಯಡಿ ಆಯ್ಕೆ ಮಾಡಿದ ಗ್ರಾಮಗಳ ಪೈಕಿ ಹುಲಗಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ತ್ಯಾಜ್ಯ ನಿರ್ವಹಣಾ ಘಟಕದ ಅಭಿವೃದ್ಧಿ ಕಾಮಗಾರಿಗಳ ನಿರ್ಮಾಣಕ್ಕೆ ರೂ.75.00 ಲಕ್ಷಗಳನ್ನು ಸುವರ್ಣ ಗ್ರಾಮೋದಯ ಯೋಜನೆಯಡಿ ಆಯ್ಕೆಯಾದ ಗ್ರಾಮಗಳಲ್ಲಿ ಅನುಮೋದಿತ ಗ್ರಾಮಾಭಿವೃದ್ಧಿ ಯೋಜನೆಯ ಕಾಮಗಾರಿಗಳ ಅನುಷ್ಠಾನಕ್ಕಾಗಿ ಮಾತ್ರ ವಿನಿಯೋಗಿಸುವುದು.**

ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪ ಯೋಜನೆಯಡಿ ಒದಗಿಸಿರುವ ಅನುದಾನವನ್ನು ಆಯಾ ಲೆಕ್ಕ ಶೀರ್ಷಿಕೆಯಡಿ ಕಡ್ಡಾಯವಾಗಿ ಭರಿಸತಕ್ಕದ್ದು.

ಈ ಅನುದಾನವನ್ನು ಓದಲಾದ (1) ರಲ್ಲಿ ನಿಗಧಿಪಡಿಸಿದಂತೆ ಈ ಆದೇಶವನ್ನು ಹೊರಡಿಸಲಾಗಿದೆ.

**ಷರತ್ತುಗಳು :**

1. ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು, ಜಿಲ್ಲಾ ಪಂಚಾಯತ್ ಇವರು ಈ ಅನುದಾನ ಬಿಡುಗಡೆ ಆದೇಶವನ್ನು ಪಡೆದ ಕೂಡಲೇ ಸಂಬಂಧಪಟ್ಟ ಅನುಷ್ಠಾನಾಧಿಕಾರಿಗಳಿಗೆ ಬಿಡುಗಡೆ ಮಾಡುವುದು ಮತ್ತು ಉಪಯುಕ್ತತಾ ಪತ್ರವನ್ನು ಕೂಡಲೇ ಸಲ್ಲಿಸುವುದು. ಬಿಡುಗಡೆಯಲ್ಲಿ ವಿಳಂಬ ನೀತಿಗೆ ಅವಕಾಶ ಕೊಡಬಾರದೆಂದು ಸೂಚಿಸಿದೆ ಮತ್ತು ಯೋಜನೆಯ ಸಮಗ್ರ ಉಸ್ತುವಾರಿಯನ್ನು ನಿರ್ವಹಿಸುವುದು ಹಾಗೂ ಪ್ರಗತಿಯ ವರದಿಯನ್ನು ಅನುಷ್ಠಾನಾಧಿಕಾರಿಗಳಿಂದ ಕ್ರೋಢೀಕರಿಸಿ ಸರ್ಕಾರಕ್ಕೆ ಸಲ್ಲಿಸುವುದು.
2. ಕಾಮಗಾರಿಗಳ ಬಿಲ್ಲುಗಳ ಹಣವನ್ನು ಪಾವತಿಸುವಾಗ ಪ್ರಗತಿಯ ಎಲ್ಲಾ ವಿವರಗಳನ್ನು ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದಲ್ಲಿ ಅಳವಡಿಸಿದ ನಂತರವೇ ಬಿಲ್ಲುಗಳ ಪಾವತಿಗೆ ಕ್ರಮ ಕೈಗೊಳ್ಳತಕ್ಕದ್ದು.
3. ಮುಖ್ಯ ಇಂಜಿನಿಯರ್, ಪಿಆರ್ಇಡಿ / ವ್ಯವಸ್ಥಾಪಕ ನಿರ್ದೇಶಕರು, ಕೆಆರ್ಐಡಿಎಲ್ ರವರು ಸುವರ್ಣ ಗ್ರಾಮೋದಯ ಯೋಜನೆಯ ಎಲ್ಲಾ ಅನುಮೋದಿತ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಅನುಷ್ಠಾನದ ಜವಾಬ್ದಾರಿಯನ್ನು ನಿರ್ವಹಿಸುವುದು.

4. ಮುಖ್ಯ ಇಂಜಿನಿಯರ್, ಪಿಆರ್ಇಡಿ / ವ್ಯವಸ್ಥಾಪಕ ನಿರ್ದೇಶಕರು, ಕೆಆರ್ಐಡಿಎಲ್ ರವರು ಕಾರ್ಯಪಾಲಕ ಅಭಿಯಂತರರು, ಪಿಆರ್ಇಡಿ / ಉಪ ನಿರ್ದೇಶಕರು, ಕೆಆರ್ಐಡಿಎಲ್ ಇವರುಗಳಿಂದ ಕಾಮಗಾರಿಗಳ ಪ್ರಗತಿಯ ವರದಿಗಳನ್ನು ಪಡೆದು ಸರ್ಕಾರಕ್ಕೆ ಕಾಲಕಾಲಕ್ಕೆ ಸಲ್ಲಿಸುವುದು.

5. ಅನುಷ್ಠಾನಾಧಿಕಾರಿಗಳು ಆರ್ಥಿಕ ಮತ್ತು ಭೌತಿಕ ಪ್ರಗತಿಯ ವಿವರವಾದ ವರದಿಯನ್ನು ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳಿಗೆ, ಮುಖ್ಯ ಇಂಜಿನಿಯರ್, ಪಿಆರ್ಇಡಿ ಮತ್ತು ವ್ಯವಸ್ಥಾಪಕ ನಿರ್ದೇಶಕರು, ಕೆಆರ್ಐಡಿಎಲ್ ಇವರುಗಳಿಗೆ ಪ್ರತಿ ಮಾಹೆ ಸಲ್ಲಿಸುವುದು.

6. ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪ ಯೋಜನೆಯಡಿ ಸಾಧಿಸಿದ ಆರ್ಥಿಕ ಮತ್ತು ಭೌತಿಕ ಪ್ರಗತಿಯ ವಿವರವಾದ ವರದಿಯನ್ನು ಪ್ರತ್ಯೇಕವಾಗಿ ಪ್ರತಿ ಮಾಹೆ ಸರ್ಕಾರಕ್ಕೆ ಸಲ್ಲಿಸುವುದು.
7. ಅನುಷ್ಠಾನಾಧಿಕಾರಿಗಳು ಹಣ ಬಳಕೆಯ ಉಪಯುಕ್ತತಾ ಪತ್ರವನ್ನು ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು, ಜಿಲ್ಲಾ ಪಂಚಾಯತ್ ಇವರುಗಳಿಗೆ ಸಲ್ಲಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಡಾ. ದೂವನಹಳ್ಳಿನಾಗರಾಜ್)
ನಿರ್ದೇಶಕರು (ಸುಗ್ರಾಯೋ, ರಸ್ತೆ & ಸೇತುವೆ)
ಹಾಗೂ ಸರ್ಕಾರದ ಪದನಿಮಿತ್ತ ಉಪ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

**ಪ್ರತಿಗಳು:**

1. ಮಹಾಲೇಖಪಾಲರು, (ಲೆಕ್ಕಪತ್ರ) ಕರ್ನಾಟಕ, ಬೆಂಗಳೂರು.
2. ಮಹಾಲೇಖಪಾಲರು, (ಆಡಿಟ್ – 1 & 2) ಕರ್ನಾಟಕ, ಬೆಂಗಳೂರು.
3. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಗ್ರಾ.ಅ.& ಪಂ.ರಾಜ್ ಇಲಾಖೆ.
5. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ. ರಾಜ್) ಗ್ರಾ.ಅ.& ಪಂ.ರಾಜ್ ಇಲಾಖೆ.
6. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
7. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ, ಬೆಂಗಳೂರು.
8. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ್, ಕೊಪ್ಪಳ
9. ಉಪ ಕಾರ್ಯದರ್ಶಿಗಳು / ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತ್, ಕೊಪ್ಪಳ ರವರಿಗೆ ಸೂಕ್ತ ಕ್ರಮಕ್ಕಾಗಿ
10. ಜಿಲ್ಲಾ ಖಜಾನಾಧಿಕಾರಿಗಳು ಜಿಲ್ಲಾ ಪಂಚಾಯತ್, ಕೊಪ್ಪಳ ರವರಿಗೆ ಸೂಕ್ತ ಕ್ರಮಕ್ಕಾಗಿ
11. ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
12. ಮುಖ್ಯ ಅಭಿಯಂತರರು, ಪಿಆರ್ಇಡಿ / ವ್ಯವಸ್ಥಾಪಕ ನಿರ್ದೇಶಕರು, ಕೆಆರ್ಐಡಿಎಲ್, ಗ್ರಾಮೀಣಾಭಿವೃದ್ಧಿ ಭವನ, ಆನಂದರಾವ್ ವೃತ್ತ, ಬೆಂಗಳೂರು.
13. ಉಪನಿರ್ದೇಶಕರು, ಖಜಾನೆ ಗಣಕ ಮಾಹಿತಿ ಜಾಲ, ಖನಿಜ ಭವನ, ಬೆಂಗಳೂರು.
14. ಖಜಾನೆಗಳ ಉಪ ನಿರ್ದೇಶಕರು, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಟವರ್, ಬೆಂಗಳೂರು.
15. ಸರ್ಕಾರದ ಉಪಕಾರ್ಯದರ್ಶಿ (ಆಡಳಿತ) ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ, ಕಂಪ್ಯೂಟರ್ ಸೆಲ್, ಈ ಆದೇಶವನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು.
16. ರಕ್ಷ ಕಡತಕ್ಕೆ/ಹೆಚ್ಚುವರಿ ಪ್ರತಿ.